# ಜಿಲ್ಲಾ ಪಂಚಾಯತ್ ಹಾಸನ

## <u>ಅಧಿಕೃತ ಜ್ಞಾಪನ</u>

ವಿಷಯ:- 2012-13ನೇ ಸಾಲಿನ 4ನೇ ತ್ರೈಮಾಸಿಕ ಅನುದಾನವನ್ನು ಲೆಕ್ಕಶೀರ್ಷಿಕೆ 2202ರಡಿ(ಸರ್ವ ಶಿಕ್ಷಣ ಅಭಿಯಾನ) ತಾಲ್ಲೂಕುವಾರು ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅಧಿಕೃತ ಜ್ಞಾಪನ/ಸುತ್ತೋಲೆ/ಆದೇಶ ಸಂಖ್ಯೆ

(1) FD/77/ZPA/2003/Dated:-8-9-2004.
(2) FD/04/ZPA/2003/Dated:-2-5-2005.
(3) FD/07/ZPA/2003/Dated:-14--2005.
(4) FD/1/ZPA/2012/Bangalore/Dated:-22-10-12.
(5) ಮುಕಾನಿಅ,ಜಿಪಂ. ಹಾಸನ ರವರ ಟಿಪ್ಪಣಿ ಕಂಡಿಕೆ ಸಂಖ್ಯೆ:9/ ತಾಅಬಿ/4/2012-13/ದಿನಾಂಕ:15-11-2012.

-o-

**<u>ಪ್ರಸ್ತಾವನೆ:-</u>**

ಉಲ್ಲೇಖ(1)ರಲ್ಲಿನ ಆದೇಶದಲ್ಲಿ ಜಿಲ್ಲಾಪಂಚಾಯತ್ ನಿಧಿ/ತಾಲ್ಲೂಕು ಪಂಚಾಯತ್ ನಿಧಿ ಲೆಕ್ಕ ನಿರ್ವಹಣೆ ಬಗ್ಗೆ ವಿವರಿಸಿದೆ. ಅದರಂತೆ ಜಿಲ್ಲಾಪಂಚಾಯತ್/ತಾಲ್ಲೂಕು ಪಂಚಾಯತ್ ನಿಧಿಗಳನ್ನು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಆಯಾ ನಿಧಿ-I, II ಹಾಗೂ III ಎಂದು ಮೂರು ಭಾಗಗಳಾಗಿ ವಿಂಗಡಿಸಿದೆ. ಅದರಂತೆ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳು ಆಯಾ ನಿಧಿಗಳಲ್ಲಿ ಬರುವ ಯೋಜನೆ ಯಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಲೆಕ್ಕ ಇಡಬೇಕಾಗಿದೆ.ಅದರ ಪ್ರಕಾರವಾಗಿ 2012-13ನೇ ಸಾಲಿನ 4ನೇ ತ್ರೈಮಾಸಿಕ ತಾಲ್ಲೂಕು ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ ಹೊರಡಿಸಲಾಗಿದೆ.

**ಜಿಪಂ.ಆದೇಶ ಸಂಖ್ಯೆ:ZPH/BUD/TPG-14/2012-13** **ದಿನಾಂಕ:~~15~~ 19-11-2012**

ಉಲ್ಲೇಖ(4)ರ ಸರ್ಕಾರಿ ಆದೇಶದಲ್ಲಿ ಜಿಲ್ಲಾ ವ್ಯಾಪ್ತಿಯ 8 ತಾಲ್ಲೂಕು ಪಂಚಾಯಿತಿಗಳು ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯ ಯೋಜನೆ ಲೆಕ್ಕಶೀರ್ಷಿಕೆಗಳಲ್ಲಿ 2012-13ನೇ ಸಾಲಿನ ಶಿಕ್ಷಣ ಇಲಾಖೆಗೆ 4ನೇ ತ್ರೈಮಾಸಿಕ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡಲಾಗಿದೆ.

ಹೀಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಆಯಾಯ ತಾಲ್ಲೂಕುಗಳಿಗೆ ಸಂಬಂಧಿಸಿದ ಅನುದಾನವನ್ನು ಬಿಳಿ ಬಣ್ಣದ ಬಿಲ್ಲಿನಲ್ಲಿ ಸರ್ಕಾರದ ಲೆಕ್ಕಕ್ಕೆ ವೆಚ್ಚ ಭರಿಸಿ ಹಳದಿ ಬಣ್ಣದ ಚಲನ್ ಮೂಲಕ ಆಯಾಯ ತಾಲ್ಲೂಕು ಪಂಚಾಯಿತಿ ನಿಧಿ- IIಕ್ಕೆ ಜಮಾ ಮಾಡಿಕೊಳ್ಳಲು ತಿಳಿಸಿದೆ ಹಾಗೂ ಬಿಳಿ/ಹಳದಿ ಬಣ್ಣದ ಪೇಯೀಸ್ ರಸೀದಿ ಮತ್ತು ಹಳದಿ ಚಲನ್ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-II ಎಂದು ಮೊಹರು ಹಾಕುವುದು.

ಈ ರೀತಿ ತಾಲ್ಲೂಕು ಪಂಚಾಯಿತಿ ನಿಧಿ-IIಕ್ಕೆ ಜಮಾ ಮಾಡಿಕೊಂಡ ಅನುದಾನವನ್ನು ನಿಯಮಾನುಸಾರ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಿಗೆ ಒಂದೇ ಕಂತಿನಲ್ಲಿ ಪೂರ್ಣ ಹಣ ಬಿಡುಗಡೆ ಮಾಡಿ ಅದರ ಒಂದು ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ಸೂಚಿಸಿದೆ.

ಅನುಷ್ಠಾನಾಧಿಕಾರಿಗಳು ವೇತನೇತರ ಅನುದಾನಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಿಗಳಿಂದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆದ ನಂತರವೇ ವೆಚ್ಚ ಭರಿಸತಕ್ಕದ್ದು, ವೆಚ್ಚ ಭರಿಸುವಾಗ ಬಿಲ್ಲಿನ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-II ಎಂದು ಮೊಹರು ಹಾಕಲು, ಅನುದಾನ ಮರು ಬಿಡುಗಡೆ (ಅನುಷ್ಠಾನಾಧಿಕಾರಿಗಳಿಗೆ) ಮಾಡುವ ಆದೇಶದಲ್ಲಿ ಪ್ರತ್ಯೇಕವಾಗಿ ಸೂಚಿಸಲಾಗುವುದು ಎಂದು ಆದೇಶಿಸಿದೆ.

ಸರ್ಕಾರದ ನಡವಳಿ ಅನುಸಾರ 2012-13ನೇ ಸಾಲಿನ ಆರ್ಥಿಕ ವರ್ಷದ ಅನುದಾನವನ್ನು ನಿಗಧಿತ ಅವಧಿಯೊಳಗೆ ಇಲಾಖೆಗೆ ಬಿಡುಗಡೆಗೊಳಿಸಲು ಹಾಗೂ ಅಧೀನ ಇಲಾಖೆಗಳಿಗೆ ವೇತನ ಸಾದಿಲ್ವಾರು, ಪ್ರವಾಸಭತ್ಯೆ, ಕಾಮಗಾರಿ ಬಿಲ್ಲುಗಳನ್ನು ಅನುದಾನ ವ್ಯವಗತವಾಗದಂತೆ ಬಿಲ್ಲುಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಮೇಲು ಸಹಿ ಪಡೆದು ನಿಗಧಿತ ಅವಧಿಯೊಳಗೆ ಖಜಾನೆಗೆ ಸಲ್ಲಿಸುವುದು. ಈ ಬಗ್ಗೆ ಅಧೀನ ಇಲಾಖೆಗೆ ಸುತ್ತೋಲೆ ನೀಡಲು ತಿಳಿಸಿದೆ.

-2)

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ತಾಲ್ಲೂಕಿನ ಹೆಸರು | ಡಿಡಿಓ ಕೋಡ್ | 2202-01-197-1-01 | | 2202-02-197-1-01 | |
|---|---|---|---|---|---|---|
| | | | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ |
| 1 | ಆಲೂರು | 1301QQ0001 | 17.12 | 0 | 0 | 0 |
| 2 | ಅರಕಲಗೂಡು | 1302QQ0001 | 28.20 | 0 | 0 | 0 |
| 3 | ಅರಸೀಕೆರೆ | 1303QQ0001 | 35.90 | 0 | 0 | 0 |
| 4 | ಬೇಲೂರು | 1304QQ0001 | 25.23 | 0 | 0 | 0 |
| 5 | ಚನ್ನರಾಯಪಟ್ಟಣ | 1305QQ0084 | 27.10 | 0 | 0 | 0 |
| 6 | ಹಾಸನ | 1300QQ0002 | 43.12 | 0 | 0 | 0 |
| 7 | ಹೊಳೆನರಸೀಪುರ | 1306QQ0006 | 22.36 | 0 | 0 | 0 |
| 8 | ಸಕಲೇಶಪುರ | 1307QQ0001 | 17.22 | 0 | 0 | 0 |
| | ಒಟ್ಟು | | 216.25 | 0 | 0 | 0 |

(ಸಹಿ)
ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

<u>ಪ್ರತಿಯನ್ನು:-</u>

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಜಿಲ್ಲಾಪಂಚಾಯತ್,ಹಾಸನ ರವರ ಮಾಹಿತಿಗೆ ಸಲ್ಲಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
3. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
4. ಉಪಕಾರ್ಯದರ್ಶಿಗಳು(ಆಡಳಿತ) ಮತ್ತು (ಅಭಿವೃದ್ಧಿ), ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರ ಮಾಹಿತಿಗೆ.
5. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್______________ ತಾಲ್ಲೂಕು ಇವರ ಅಗತ್ಯ ಕ್ರಮ್ಕಕಾಗಿ.
6. ಜಿಲ್ಲಾ ಖಜಾನಾಧಿಕಾರಿಗಳು, ಖಜಾನೆ ಇಲಾಖೆ,ಹಾಸನ ರವರ ಮಾಹಿತಿಗೆ.
7. ಉಪ ಖಜಾನಾಧಿಕಾರಿಗಳು ____________ ತಾಲ್ಲೂಕು ರವರ ಮಾಹಿತಿಗೆ.
8. ಉಪನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ,ಹಾಸನ ಮತ್ತು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ.
9. ಕಛೇರಿ ಪ್ರತಿ.

ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

TP-1